103.	ಅಂಡಗದುದೂರು	ನರಿಕುಚಿವಾಸಪ್ಪನ ಮನೆ ಹತ್ತಿರ	0.15
104.	ನಗರ	ಹಿಲ್ಕುಂಜಿ ಬಿಳಿಯ ನಾಯ್ಕರ ಮನೆ ಹತ್ತಿರ	0.15
105.	ಅರಮನೆಕೊಪ್ಪ	ಬ್ರಾಹ್ಮಣತರುವೆ ಎಮ್ಮೆಹೊಂಡದಲ್ಲಿ	0.15
106.	ಹರತಾಳು	ಕಾವೇರ ಮನೆ ಹತ್ತಿರ	0.25
107.	ಮಾರುತಿಪುರ	ಮಾವಿನಹೊಳೆ ಹತ್ತಿರ	0.25
108.	ನಗರ	ಗುಂಡಿಗದ್ದೆ ನಾಗಮ್ಮನ ಮನೆ ಹತ್ತಿರ	0.30
109.	ಅಂಡಗದುದೂರು	ಉಳ್ಳಗದ್ದೆ ಸುಬ್ರಹ್ಮಣ್ಯನ ಮನೆ ಹತ್ತಿರ	0.30
110.	ಕರಿಮನೆ	ಯೋಗೇಂದ್ರನ ಮನೆ ಹತ್ತಿರ	0.15
		2004–05	
1.	ಹರತಾಳು	ಹರತಾಳು ಕಲ್ಲು ಕೋರೆಯಲ್ಲಿ	0.46
2.	ಹರಿದ್ರಾವತಿ	ಅಡಾಳಕೊಪ್ಪ ಶೆಟ್ಟಿಕೇರಿಯಲ್ಲಿ	0.30
3.	ಹೆದ್ದಾರಿಪುರ	ಹೆದ್ದಾರಿಪುರ ಗ್ರಾಮದಲ್ಲಿ	0.40
4.	ಕೆಂಚಸಾಲರ	ಗಾಳಿ ಬೈಲು ಗ್ರಾಮದಲ್ಲಿ	0.40
5.	ಹೆದ್ದಾರಿಪುರ	ಹೆದ್ದಾರಿಪುರ ಪುಟ್ಟಯ್ಯಗೌಡರ ಮನೆ ಹತ್ತಿರ	0.20
6.	ನಿಟ್ಟೂರು	ಕುಬ್ಳೆಯಲ್ಲಿ ಬಾವಿ ನಿರ್ಮಾಣ (ಸುಬ್ರಹ್ಮಣ್ಯನ ಮನೆ ಹತ್ತಿರ)	0.30
7.	ನಗರ	ನೆತ್ರಬೈಲು ಜನತಾ ಕಾಲೋನಿಯಲ್ಲಿ	0.35
8.	ತ್ರಿಣಿವೆ	ತೊಗಲೆ ಈಶ್ವರ ದೇವಸ್ಥಾನ ಹತ್ತಿರ	0.35

5018 (5894) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕರ್ನಾಟಕದಲ್ಲಿ ಶಾಲಾ ಸಂಸ್ಥೆಗಳಿಂದ ಕ್ಯಾಪಿಟೇಷನ್ ಫೀಜ್‌ನ್ನು ವಸೂಲಿ ಮಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರವು ಏನಾದರೂ ನಿರ್ಬಂಧವನ್ನು ಹೇರಲಾಗಿದೆಯೇ;

ಇ) ಈ ಒಂದು ಕಾನೂನುಬಾಹಿರ ಕ್ರಮವನ್ನು ತಡೆಗಟ್ಟಲು ಸರ್ಕಾರವು ತಗೆದುಕೊಳ್ಳಬಹುದಾದ ಕ್ರಮವೇನು ;

ಈ) ಇಂತಹ ಕಾನೂನು ಬಾಹಿರ ಕ್ರಮವನ್ನು ತಡೆಗಟ್ಟಲು ಅದಕ್ಕೆ ಕಾರಣವಾಗಿರುವ ಅಧಿಕಾರಿಗಳು ವಿರುದ್ಧ ಸರ್ಕಾರವು ಸೂಕ್ತ ಕ್ರಮ ಜರುಗಿಸುವುದೇ?

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. :

ಅ) ಹೌದು

ಆ) ಹೌದು

ಇ) (ಈ) 1. ದಿ ಕರ್ನಾಟಕ ಎಜುಕೇಷನಲ್ ಇನ್ಸ್‌ಟಿಟ್ಯೂಷನ್ಸ್ (ಪ್ರಾಹಿಬಿಷನ್ ಆಫ್ ಕ್ಯಾಪಿಟೇಷನ್ ಫೀಜ್) ಕಾಯ್ದೆ 1984 ರಡಿ ನಿಯಮಗಳನ್ನು ರಚಿಸಲಾಗಿದೆ.

2. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕೆಲವು ಶುಲ್ಕ ಹಾಗೂ ವಂತಿಗೆಯ ಕ್ರಮಬದ್ದತೆ) ನಿಯಮಗಳು, 1999 ನ್ನು ರಚಿಸಲಾಗಿದೆ.

3. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮದ ನಿಗದಿಪಡಿಸುವಿಕೆ, ಇತ್ಯಾದಿ) ನಿಯಮಗಳು, 1995 ನ್ನು ರಚಿಸಲಾಗಿದ್ದು, ಅದರಲ್ಲಿ ಇತರ ವಿಷಯಗಳನ್ನೊಳಗೊಂಡಂತೆ ಜಿಲ್ಲಾ ಮಟ್ಟದ ಶಿಕ್ಷಣ ಕ್ರಮಬದ್ಧತೆ ಪ್ರಾಧಿಕಾರವನ್ನು ಸಹ ಈ ನಿಯಮಗಳಡಿ ರಚಿಸಲಾಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ನಿಯಮ 15 ನ್ನು ಈ ಕೆಳಕಂಡಂತೆ ಉದ್ದರೀಕರಿಸಿದೆ:

'15. Violation of Rules regarding admission fees, or any provisions in the Act or Rules by the Institution:

(1) Any parent who is aggrieved by:-

(c) Violation of any of the provisions of these rules with respect to admissions by the institutions;

(d) Violation of any of the provisions of these rules with respect to collection of fees;

(2) 'The District Regulationg Authority may also suomotu or on complaint made by any person interested orally or otherwise make an enquiry to satify themselves as to the correctness of the complaint and may pass orders as it may consider fit, after giving an opportunity to the party adversely affected by it an opportunity of making representation.

4. ಸರ್ಕಾರವು ಈ ವಿಚಾರವಾಗಿ ದಿನಾಂಕ 28–04–2003 ರಂದು ಸುತ್ತೋಲೆ ಸಂಖ್ಯೆ ಇಡಿ 117 ಪಿಜಿಸಿ 2003 ನ್ನು ಹೊರಡಿಸಿದೆ.

5019 (5312) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಪಠ್ಯಪುಸ್ತಕಗಳ ಕೊರತೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ಪಠ್ಯ ಪುಸ್ತಕಗಳ ಕೊರತೆಗೆ ಕಾರಣಗಳೇನು;

ಇ) ಪ್ರತಿ ವರ್ಷ ಈ ರೀತಿಯ ಕೊರತೆಯಿಂದ ವಿದ್ಯಾರ್ಥಿಗಳ ಅಭ್ಯಾಸದಲ್ಲಿ ಕುಂಠಿತವಾಗಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಈ ಕೊರತೆ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. :

ಅ) ಉಚಿತವಿತರಣೆಯ ಪಠ್ಯ ಪುಸ್ತಕಗಳಲ್ಲಿ ಯಾವುದೇ ಕೊರತೆ ಇಲ್ಲ. ಅವುಗಳನ್ನು ಶಾಲಾ ಪ್ರಾರಂಭದಲ್ಲೇ ವಿತರಿಸಲಾಗಿದೆ. ಆದರೆ ಮಾರಾಟ ವಿಭಾಗದ ಪಠ್ಯ ಪುಸ್ತಕಗಳ ಕೆಲವು ಶೀರ್ಷಿಕೆಗಳಲ್ಲಿ ಸ್ವಲ್ಪ ಕೊರತೆ ಕಂಡುಬಂದಿದೆ.

ಆ) ಮುದ್ರಣ ಕಾಗದದಕೊರತೆ: ಕನಿಷ್ಠದರದ ಅನ್ವಯ ರಾಜ್ಯದ ಮುದ್ರಕರಿಗೆ ಮುದ್ರಣವನ್ನು ನೀಡುವ ಪರಿಪಾಠ ಇತ್ಯಾದಿಗಳು.